# ಗುರುಕೃಪಾಯೋಗದ ಮಹಿಮೆ

(ಇತರ ಯೋಗಮಾರ್ಗಗಳ ತುಲನೆಯಲ್ಲಿ ಗುರುಕೃಪಾಯೋಗವು ಶ್ರೇಷ್ಠ !)

**ಪ್ರಸ್ತುತ ಗ್ರಂಥದ ಅನುಕ್ರಮಣಿಕೆ**


**ಅಧ್ಯಾಯ ೧ : ಗುರುಕೃಪಾಯೋಗ** ೧೨

೧ ಅ. ಅರ್ಥ ೧ ಆ. ಗುರುಕೃಪಾಯೋಗದ ನಿರ್ಮಿತಿ ಮತ್ತು ಸ್ಥಿತಿ ೧೨

೧ ಇ. ಮಹತ್ವ ೧ ಈ. ವೈಶಿಷ್ಟ್ಯಗಳು ೧೨

೧ ಉ. ಗುರುಕೃಪೆ ಹೇಗೆ ಕಾರ್ಯ ಮಾಡುತ್ತದೆ ? ೪೨

**ಅಧ್ಯಾಯ ೨ : ಗುರುಕೃಪಾಯೋಗ ಮತ್ತು ಇತರ ಯೋಗಮಾರ್ಗಗಳ ತುಲನೆ** ೫೦

೨ ಅ. ಗುರುಕೃಪಾಯೋಗವೆಂದರೆ 'ವಿಹಂಗಮ ಯೋಗ' ಮತ್ತು ಇತರ ಯೋಗಗಳೆಂದರೆ 'ಭಾಸಮಾನ (ತೋರಿಕೆಯ) ಯೋಗಗಳು' ಮತ್ತು ಅವುಗಳಿಂದ 'ವಿಯೋಗ'ವಾಗುವುದು ೫೦

೨ ಆ. ವಿಶಿಷ್ಟ ಯೋಗಮಾರ್ಗ ಮತ್ತು ಗುರುಕೃಪಾಯೋಗ ೫೦

೨ ಇ. ಮಟ್ಟಕ್ಕನುಸಾರ ವಿವಿಧ ಯೋಗಮಾರ್ಗಗಳಿಗನುಸಾರ ಸಾಧನೆ ೬೦

೨ ಈ. ಉನ್ನತಿಯ ಲಕ್ಷಣಗಳು ೬೪

೨ ಉ. ಉನ್ನತಿಯ ಪ್ರಮಾಣ ೬೮

೨ ಊ. ಗುರುಗಳು ಹೇಳಿದ ಮತ್ತು ಸ್ವಂತ ಮನಸ್ಸಿನಂತೆ ಮಾಡಿದ ಬೇರೆಬೇರೆ ಯೋಗಮಾರ್ಗಗಳ ಪ್ರಗತಿಯ ಹಂತಗಳ ಅಂದಾಜು ತುಲನೆ ೭೦

೨ ಎ. 'ಗುರುಕೃಪಾಯೋಗದಿಂದ ಜೀವವು ಸ್ವಾವಲಂಬಿಯಾಗುತ್ತದೆ ಮತ್ತು ಇತರ ಯೋಗಗಳಿಂದ ಜೀವವು ದಿವ್ಯಶಕ್ತಿಯ ಕೈಯಲ್ಲಿ ಸಿಲುಕಿಕೊಂಡು ಪರಾವಲಂಬಿಯಾಗುತ್ತದೆ. ೭೫

**ಅಧ್ಯಾಯ ೩ : ಕೆಟ್ಟ ಶಕ್ತಿಗಳ ತೊಂದರೆ ಮತ್ತು ಗುರುಕೃಪಾಯೋಗ** ೭೬

೩ ಅ. ಮಾಂತ್ರಿಕರ ತೊಂದರೆಗಳಿರುವಾಗಲೂ ಸಾಧಕರು ಗುರುಕೃಪಾ ಯೋಗಾನುಸಾರ ಸಮಷ್ಟಿ ಕಾರ್ಯವನ್ನು ಮುಂದುವರೆಸುತ್ತಲೇ ಇರುವುದರಿಂದ ಮಾಂತ್ರಿಕರು ಕೋಪಗೊಂಡು ತೊಂದರೆಗಳನ್ನು ನೀಡುವುದು ೭೬

೩ ಆ. ಗುರುಕೃಪಾಯೋಗಾನುಸಾರ ಸಾಧನೆ ಮಾಡುವ ಸಾಧಕರಿಗೆ ಕೆಟ್ಟ ಶಕ್ತಿಗಳು ಗುರುರೂಪವನ್ನು ಧರಿಸಿ ಅಥವಾ ಉಪಾಸ್ಯದೇವತೆಯ ರೂಪವನ್ನು ಧರಿಸಿ ಹೆಚ್ಚು ಸಮಯ ಮೋಸಗೊಳಿಸಲು ಸಾಧ್ಯವಾಗುವುದಿಲ್ಲ ೭೬

೩ ಇ. ಗುರುಕೃಪಾಯೋಗಾನುಸಾರ ಸಾಧನೆ ಮಾಡುವವರು ನಿರ್ಗುಣ ಈಶ್ವರನ

ಉಪಾಸಕರಾಗಿರುವುದರಿಂದ ಮತ್ತು ಅವರಲ್ಲಿ ಅಧ್ಯಯನದ ವೃತ್ತಿಯಿರುವುದ ರಿಂದ ಮೋಹಿನಿರೂಪದಲ್ಲಿ ಸಾಧಕರನ್ನು ಮೋಸಗೊಳಿಸುವ ಮಾಂತ್ರಿಕರ ಪ್ರಯತ್ನ ಕೇವಲ ಶೇ. ೧೦ ರಷ್ಟು ಯಶಸ್ವಿಯಾಯಿತು ೭೭

೩ ಈ. ಗುರುಕೃಪಾಯೋಗವು ಸಾಧಕರಿಗೆ ಸಮಷ್ಟಿ ಸಾಧನೆಯಿಂದ ನಿರ್ಗುಣ ಭಕ್ತಿಯನ್ನು ಕಲಿಸಿರುವುದರಿಂದ, ಸಪ್ತದೇವತೆಗಳ ಆಶೀರ್ವಾದದಿಂದ ಮತ್ತು ಪರಾತ್ಪರ ಗುರು ಡಾಕ್ಟರರ ಸಂಕಲ್ಪಶಕ್ತಿಯಿಂದ ಸಾಧಕರು ಮಾಂತ್ರಿಕರ ಬಲೆಯಲ್ಲಿ ಸಿಲುಕಿಕೊಳ್ಳಲಿಲ್ಲ ೭೭

೩ ಉ. ಸ್ವಭಾವದೋಷಗಳನ್ನು ಕಡಿಮೆಗೊಳಿಸುವುದರಿಂದ ಮನೋಲಯ ಮತ್ತು ಬುದ್ಧಿಲಯವಾಗಿ ಕೆಟ್ಟ ಶಕ್ತಿಗಳೊಂದಿಗೆ ಹೋರಾಡಲು ಹಾಗೂ ಸಮಾಜದಲ್ಲಿ ಧರ್ಮ ಕಾರ್ಯವನ್ನು ಮಾಡಲು ಸಾಧ್ಯವಾಗುತ್ತದೆ ಮತ್ತು ಇದನ್ನೇ ಗುರುಕೃಪಾಯೋಗವು ಕಲಿಸುತ್ತದೆ ೭೭

೩ ಊ. ಈಶ್ವರನಿಗೆ ಪ್ರಿಯವಾಗಿರುವ ಸತ್ತ್ವಗುಣವು ಇಂಧನಸ್ವರೂಪವಾಗಿರುವುದ ರಿಂದ ಅದು ಅಸುರರ ರಜ-ತಮ ಗುಣಾತ್ಮಕ ಶಕ್ತಿಯನ್ನು ಸೋಲಿಸಬಲ್ಲದು ಮತ್ತು ಗುರುಕೃಪಾಯೋಗದಿಂದ ಇದೇ ಸಾಧ್ಯವಾಗುತ್ತದೆ ೭೮

೩ ಎ. 'ಕೆಟ್ಟ ಶಕ್ತಿಗಳ ತೊಂದರೆಗಳಿಗೆ ಶಾಶ್ವತ ಪರಿಹಾರೋಪಾಯವೆಂದರೆ ಗುರುಕೃಪಾಯೋಗದಲ್ಲಿ ಹೇಳಲಾದ ಕ್ಷಾತ್ರಧರ್ಮ ಸಾಧನೆಯನ್ನು ಮಾಡುವುದು ೭೯

**ಅಧ್ಯಾಯ ೪ : ಈಶ್ವರೀ ರಾಜ್ಯದ ಸ್ಥಾಪನೆ ಮತ್ತು ಗುರುಕೃಪಾಯೋಗ ೮೦**

೪ ಅ. ಗುರುಕೃಪಾಯೋಗಾನುಸಾರ ಸಾಧನೆಯನ್ನು ಮಾಡುವಾಗ ತೊಂದರೆಗಳನ್ನು ಸಹಿಸುವವರು, ಹಾಗೆಯೇ ಕ್ಷಾತ್ರತೇಜ ಮತ್ತು ಬ್ರಾಹ್ಮತೇಜವಿರುವವರು ಮೋಕ್ಷಪ್ರಾಪ್ತಿಗೆ ಅರ್ಹರಾಗಿರುವರು ಮತ್ತು ಅವರೇ ಈಶ್ವರೀ ರಾಜ್ಯವನ್ನು ನಿರ್ಮಿಸಬಲ್ಲರು ೮೦

೪ ಆ. ಗುರುಕೃಪಾಯೋಗದಲ್ಲಿ ಈಶ್ವರೀ ರಾಜ್ಯಕ್ಕಾಗಿ ಸಾಧನೆ, ಸಮಷ್ಟಿ ಸಾಧನೆ ಮತ್ತು ವ್ಯಷ್ಟಿ ಸಾಧನೆಯ ತ್ರಿವೇಣಿ ಸಂಗಮವಿರುವುದರಿಂದಲೇ ಈ ಯೋಗದ ಮೂಲಕ ಜೀವಗಳ ಆಧ್ಯಾತ್ಮಿಕ ಉನ್ನತಿಯು ಶೀಘ್ರವಾಗಿ ಆಗುತ್ತಿದೆ ಮತ್ತು ಸಾಧಕರಿಗೆ ಈಶ್ವರೀ ರಾಜ್ಯವನ್ನು ಸ್ಥಾಪಿಸಲು ಸಾಧ್ಯವಾಗಲಿದೆ ೮೧

೪ ಇ. ಗುರುಕೃಪಾಯೋಗಾನುಸಾರ ಸಾಧನೆಯನ್ನು ಮಾಡುವುದರಿಂದ ಈಶ್ವರೀ ರಾಜ್ಯದ ಸ್ಥಾಪನೆಯಾಗುವುದರ ಪ್ರಕ್ರಿಯೆ ೮೨

**卐 ಸಂಕಲನಕಾರರ ವೈಜ್ಞಾನಿಕ ದೃಷ್ಟಿಕೋನ ಮತ್ತು ಇತರ ಮಾಹಿತಿ ೮೩**

## ಮನೋಗತ

ಈಶ್ವರಪ್ರಾಪ್ತಿಗಾಗಿ ಕರ್ಮಯೋಗ, ಭಕ್ತಿಯೋಗ, ಧ್ಯಾನಯೋಗ, ಜ್ಞಾನಯೋಗ ಗಳಂತಹ ವಿವಿಧ ಯೋಗಮಾರ್ಗ (ಸಾಧನಾಮಾರ್ಗ) ಗಳಿವೆ. ಇವೆಲ್ಲವುಗಳು ಸಂಗಮವೆಂದರೆ 'ಗುರುಕೃಪಾಯೋಗ' ! ಆದುದರಿಂದ ಗುರುಕೃಪಾಯೋಗಾನುಸಾರ ಸಾಧನೆಯನ್ನು ಮಾಡುವವರಿಗೆ ಯಾವುದೇ ಒಂದು ವಿಶಿಷ್ಟ ಯೋಗಮಾರ್ಗವನ್ನು ಅವಲಂಬಿಸಿ ಸಾಧನೆಯನ್ನು ಮಾಡಬೇಕಾಗಿರುವುದಿಲ್ಲ. ಅವರ ಆಧ್ಯಾತ್ಮಿಕ ಉನ್ನತಿಯು ಸಹಜ, ಸರ್ವಾಂಗೀಣ ಮತ್ತು ಇತರ ಯೋಗಮಾರ್ಗಗಳ ತುಲನೆಯಲ್ಲಿ ಶೀಘ್ರವಾಗಿ ಆಗುತ್ತದೆ. ಆದುದರಿಂದ 'ಗುರುಕೃಪಾಯೋಗ'ವು ಈಶ್ವರಪ್ರಾಪ್ತಿಯ ಸರ್ವಶ್ರೇಷ್ಠ 'ಸಹಜಯೋಗ'ವಾಗಿದೆ.

ಒಬ್ಬನೇ/ಏಕಾಂಗಿಯಾಗಿ ಸಾಧನೆ ಮಾಡಿ ಸ್ವಬಲದಲ್ಲಿ ಈಶ್ವರಪ್ರಾಪ್ತಿ ಮಾಡಿ ಕೊಳ್ಳುವುದು ತುಂಬಾ ಕಠಿಣವಾಗಿರುತ್ತದೆ. ಇದರ ಬದಲು ಅಧ್ಯಾತ್ಮದಲ್ಲಿನ ಓರ್ವ ಅಧಿಕಾರಿ ವ್ಯಕ್ತಿಯ, ಅಂದರೆ ಗುರು ಅಥವಾ ಸಂತರ ಕೃಪೆ ಸಂಪಾದಿಸಿದರೆ, ಈಶ್ವರ ಪ್ರಾಪ್ತಿಯ ಧ್ಯೇಯವು ಬೇಗನೇ ಸಾಧ್ಯವಾಗುತ್ತದೆ. ಇದೇ ಗುರುಕೃಪೆಯ ಮಹತ್ವವಾಗಿದೆ. ಗುರುಗಳು ಶಿಷ್ಯನ ಅಜ್ಞಾನವನ್ನು ನಿವಾರಿಸಿ ಅವನ ಅಹಂ ಅನ್ನು ಕಡಿಮೆಗೊಳಿಸು ತ್ತಾರೆ, ಆದ್ದರಿಂದ ಅವರು ಹೇಳಿದ ಸಾಧನೆ ಮಾಡಿದರೆ ಶೀಘ್ರ ಉನ್ನತಿಯಾಗುತ್ತದೆ.

ಗುರುಕೃಪಾಯೋಗದ ಮಹತ್ವವೇನು, ಗುರುಕೃಪಾಯೋಗಾನುಸಾರ ಸಾಧನೆ ಮಾಡಿದರೆ ಇತರ ಸಾಂಪ್ರದಾಯಿಕ ಸಾಧನೆಗಳ ಮತ್ತು ಯೋಗಮಾರ್ಗಗಳ ತುಲನೆ ಯಲ್ಲಿ ಕಡಿಮೆ ಕಾಲಾವಧಿಯಲ್ಲಿ ಶೀಘ್ರ ಆಧ್ಯಾತ್ಮಿಕ ಉನ್ನತಿ ಏಕೆ ಮತ್ತು ಹೇಗೆ ಆಗುತ್ತದೆ, ಗುರುಕೃಪಾಯೋಗದಲ್ಲಿ ಮೃತ್ಯುವಿನ ಮೊದಲು ಮತ್ತು ಮೃತ್ಯುವಿನ ನಂತರವೂ ಜೀವದ ಮೇಲೆ ಗುರುಕೃಪೆ ಹೇಗಿರುತ್ತದೆ ಇವುಗಳಂತಹ ವಿವಿಧ ವಿಷಯಗಳ ಮೇಲೆ ಮಾರ್ಗದರ್ಶನ ಮಾಡುವ ಈ ಗ್ರಂಥವು ತಮ್ಮನ್ನು ಒಂದು ನಾವೀನ್ಯಪೂರ್ಣ ಜ್ಞಾನವಿಶ್ವಕ್ಕೆ ಕೊಂಡೊಯ್ಯುತ್ತದೆ.

ಸನಾತನದ ಸಾಧಕರಿಗೆ ದೊರಕಿದ ಜ್ಞಾನವನ್ನು ಈ ಗ್ರಂಥದಲ್ಲಿ ಸಮಾವೇಶ ಗೊಳಿಸಿದ್ದು ಅದು ತಿಳಿದುಕೊಳ್ಳಲು ಸ್ವಲ್ಪ ಕಠಿಣವಾಗಿದೆ. ಹೀಗಿದ್ದರೂ ಪ್ರತ್ಯಕ್ಷ ಸಾಧನೆ ಮಾಡುವವನಿಗೆ ಈ ಜ್ಞಾನವು ಕಠಿಣವೆನಿಸಲಾರದು. ಜಿಜ್ಞಾಸೆ ಮತ್ತು ತಳಮಳವಿದ್ದರೆ ಪ್ರಾಥಮಿಕ ಸ್ಥಿತಿಯಲ್ಲಿರುವ ಸಾಧಕನಿಗೂ ಈ ಜ್ಞಾನವನ್ನು ತಿಳಿದುಕೊಳ್ಳಲು ಸಾಧ್ಯವಿದೆ.

ಈ ಗ್ರಂಥದಲ್ಲಿನ ಜ್ಞಾನವು ಪ್ರತಿಯೊಬ್ಬರಿಗೂ ತಮ್ಮ ಸಾಧನೆಯನ್ನು ಹೆಚ್ಚಿಸಿ ಈಶ್ವರಪ್ರಾಪ್ತಿ ಮಾಡಿಕೊಳ್ಳಲು ಉಪಯುಕ್ತವಾಗಲಿ ಎಂದು ಶ್ರೀ ಗುರುಚರಣಗಳಲ್ಲಿ ಪ್ರಾರ್ಥನೆ. – **ಸಂಕಲನಕಾರರು**